**ದಿನಾಂಕ 12.10.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ**

ನಾನು 7 ನೇ ತರಗತಿವರೆಗೆ ಓದಿದ್ದೇನೆ. ನನ್ನ ಹೆಸರಿಗೆ ಆಗಿರುವ ಕ್ರಯ ಪತ್ರ ಯಾವ ಸರ್ವೆ ನಂಬರ್ ನಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ ಅದು ನನ್ನ ಗಂಡನಿಗೆ ಗೊತ್ತು. ನಾನು ಬರೆಸಿಕೊಂಡಿರುವ ಸರ್ವೆ ನಂಬರ್ ಶಿವರಾಜು ಮತ್ತು ಅವರ ಅಣ್ಣತಮ್ಮಂದಿರ ಆಸ್ತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಕ್ರಯಕ್ಕೆ ಕೊಂಡ ಸಂದರ್ಭದಲ್ಲಿ ಶಿವರಾಜುರವರ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ಸರಿ. ನಾನು ನನ್ನ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಯಾರೆಲ್ಲಾ ಹೆಸರನಲ್ಲಿ ದಾಖಲಾತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು. ಈ ದಾವೆಯಲ್ಲಿ ಸಲ್ಲಿಸಿರುವ ನನ್ನ ತಕರಾರಿನಲ್ಲಿ ನನ್ನ ಗಂಡನೇ ಹೇಳಿ ತಯಾರು ಮಾಡಿಸಿದ್ದಾರೆ. ಈ ದಾವೆಯಲ್ಲಿ ಏನೆಲ್ಲಾ ದಾಖಲೆಗಳನ್ನು ಕೊಟ್ಟಿದ್ದಾರೆಂದು ನನಗೆ ಗಂಡನಿಗೆ ಗೊತ್ತು. ಈ ಪ್ರಮಾಣ ಪತ್ರಿಕೆಯನ್ನು ನನ್ನ ಗಂಡ ತಯಾರು ಮಾಡಿಸಿದ್ದಾರೆ. ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ವಿಚಾರಗಳು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಪ್ರಮಾಣ ಪತ್ರಿಕೆಯ ಸಂಗತಿಗಳನ್ನು ನನಗೆ ಓದಿ ಹೇಳಿಲ್ಲ. ನನ್ನ ಹೆಸರಿಗೆ ಪತ್ರ ನೊಂದಣಿ ಆದ ಮೇಲೆ ಈ ದಾವೆ ದಾಖಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಕ್ರಯ ಪತ್ರಕ್ಕೆ ವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ. ಚಿಕ್ಕಮಲ್ಲಮ್ಮ ಮತ್ತು ಮಹದೇವಯ್ಯನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಚಿಕ್ಕಮಲ್ಲಮ್ಮ ರಾಣಿ ಎಂಬುವವರ ಮಗ ಕಾರ್ತಿಕ್ ನನ್ನು ದತ್ತು ಪಡೆದುಕೊಂಡಿದ್ದಾರೆ ಎಂದರೆ ಸರಿ. ವಾದಿಗಳಿಗೆ ಇದ್ದ ಹಿಸ್ಸೆಯ ಹಕ್ಕನ್ನು ನಿರಾಕರಿಸಿ ನನ್ನ ಗಂಡ ನನ್ನ ಹೆಸರಿಗೆ ಕ್ರಯ ಪತ್ರ ಬರೆಸಿದ್ದಾರೆ ಎಂದರೆ ಸರಿಯಲ್ಲ. ನನಗೆ ಆಗಿರುವ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಆ ಸರ್ವೆ ನಂದಬರ್ ನಲ್ಲಿ ಎಷ್ಟು ವಿಸ್ತೀರ್ಣ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಗಂಡ ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.